ಮರೆಯುವುದು ಕಷ್ಟವಾಗತ್ತೇಂತ ಗೊತ್ತು. ನನಗೆ ಅವನ ನರಳಾಟ ನೋಡಕ್ಕೆ ಭಯವಾಗಿತ್ತು. ಬಾಲು ಬಲವಂತಕ್ಕೋಸ್ಕರ ನಾನವನನ್ನು ನೋಡಲು ಬರ್ತಿದ್ದೆ. ನನ್ನ ವರ್ತನೆಯಿಂದ ಸುಮೇರು ತಂದೆತಾಯಿಯರಿಗೆ ಬೇಸರವಾಗಿತ್ತು. ಅವರು ಶಿವಾನಿ ದೇವಸ್ಥಾನಗಳಿಗೆ ಅಲೆಯುತ್ತಿದ್ದಾಳೇಂತ ಸುಳ್ಳು ಹೇಳ್ತಿದ್ರು. ಸುಮೇರು ಅದನ್ನು ನಂಬಿದ್ದ..."

"ಛೆ. ಅವನು ನಿನ್ನಲ್ಲಿ ತನ್ನ ಪ್ರಾಣ ಇಟ್ಟುಕೊಂಡಿದ್ದ..."

"ಅದೇ ನನಗೆ ಕಷ್ಟವಾಗಿದ್ದಿದ್ದು. ಆ ವಿಚಾರ ಬಿಡು. ನಾನು ನಿಮ್ಮಿಬ್ಬರಷ್ಟು ಭಾವಜೀವಿಯಲ್ಲ..."

"ಇರಬಹುದು. ಎಲ್ಲರೂ ಒಂದೇ ತರಹ ಇರಲು ಸಾಧ್ಯವಿಲ್ಲ."

"ಬೈದ ಬೈ ನಾನು ನನ್ನ ತಂದೆ ಫ್ರೆಂಡ್ ಮಗ ಶುಕ್ಲಾನ್ನ ಮದುವೆ ಆಗ್ತಿದ್ದೀನಿ. ಅವನೂ ಡೈವೋರ್ಸಿ. ಅಮೆರಿಕಾದಲ್ಲಿದ್ದಾನೆ. ನೀನು ರಚನಾನ್ನ ಮದುವೆಯಾಗಿ ಸುಖವಾಗಿರು..."

"ಥ್ಯಾಂಕ್ ಯು ಶಿವಾನಿ."

"ಒಂದು ವೇಳೆ ನಾವಿಬ್ಬರೂ ಸುಮೇರು ಮಾತಿಗೆ ಬೆಲೆಕೊಟ್ಟು ಮದುವೆಯಾದರೂ ಸುಖವಾಗಿರಲ್ಲ..."

ಅಷ್ಟರಲ್ಲಿ ಶಿವಾನಿಯ ತಾಯಿ ಜ್ಯೂಸ್ ತಂದರು. ಅವನು ಆರಾಮವಾಗಿ ಜ್ಯೂಸ್ ಹೀರಿದ.

ಶಿವಾನಿಯ ಮನೆಯಿಂದ ಹೊರಗೆ ಬಂದ ಸೂರ್ಯನ ಮನಸ್ಸು ಗಾಳಿಯಷ್ಟು ಹಗುರವಾಗಿತ್ತು. ಬೀಳುತ್ತಿದ್ದ ತುಂತುರು ಮಳೆ ಮುದ ನೀಡಿತು. ರಚನಾಳ ಕನಸು ಕಾಣುತ್ತಾ ಹೆಜ್ಜೆ ಹಾಕಿದ.


**ಸಿ.ಎನ್. ಮುಕ್ತಾ**

ಹುಟ್ಟಿದ್ದು ಚಿತ್ರದುರ್ಗದಲ್ಲಿ. ಹೆಗ್ಗಡದೇವನ ಕೋಟೆ ತಾಲ್ಲೂಕಿನ ಸಂತೆ ಸರಗೂರು ಹಾಗೂ ಕೆ.ಆರ್. ನಗರ, ಮೈಸೂರುಗಳಲ್ಲಿ ಶಿಕ್ಷಣ. ಪ್ರೌಢಶಾಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರು.

'ಆಶ್ರಯ', 'ಅನಾವರಣ', 'ಅಪರಿಚಿತರು', 'ಅಸ್ವೀಕೃತರು', 'ಅನುರಾಗ ತಂದ ಅನುಬಂಧ', 'ಗೆಲುವಿನ ಹೆಜ್ಜೆ', 'ಕ್ಷಮಯಾಧರಿತ್ರಿ', 'ಸುಖದ ಸೋಪಾನಗಳು', 'ದಡ ಸೇರಿದ ನೌಕೆ', 'ಜೀವನ ಚಕ್ರ', 'ಅಮೃತಮಯಿ', 'ಕುಸುಮ ಕಸ್ತೂರಿ', 'ಪ್ರೇಮಾಂಜಲಿ', 'ವಿಮುಕ್ತಿ', 'ಪರಿಭ್ರಮಣ' ಸೇರಿದಂತೆ 65 ಕಾದಂಬರಿಗಳು ಪ್ರಕಟವಾಗಿವೆ. 10 ಕಥಾಸಂಕಲನಗಳು ಹಾಗೂ ಒಂದು ಪ್ರಬಂಧ ಸಂಕಲನ ಪ್ರಕಟವಾಗಿವೆ. 'ಗೆಲುವಿನ ಹೆಜ್ಜೆ', 'ಸುಖದ ಸೋಪಾನಗಳು', 'ಅಮೃತಮಯಿ', 'ಮೌನರಾಗ', 'ಕ್ಷಮಯಾಧರಿತ್ರಿ' ಸೇರಿದಂತೆ ಅನೇಕ ಕಾದಂಬರಿಗಳು ದೂರದರ್ಶನ ಧಾರಾವಾಹಿಗಳಾಗಿ ಪ್ರಸಾರವಾಗಿವೆ. 'ಮುಖವಾಡ' ಹಾಗೂ 'ಪಾಲು' ಕಿರುಚಿತ್ರಗಳಾಗಿವೆ. 'ದೋಣಿಸಾಗಲಿ' ಹಾಗೂ 'ಮೇಘಮಂದಾರ' ಕಾದಂಬರಿಗಳು ಚಲನಚಿತ್ರಗಳಾಗಿವೆ.